1. ಪೂರ್ವ ರೈಲ್ವೆ ವಲಯದ ಕೇಂದ್ರ ಕಚೇರಿ ಎಲ್ಲಿದೆ ?

1) ಹುಬ್ಬಳ್ಳಿ 2) ಕೋಲ್ಕತ್ತಾ
3) ದೆಹಲಿ 4) ಜೈಪುರ

2. ಭಾರತದ ಪ್ರಥಮ ಮಹಿಳಾ ಮುಖ್ಯ ಚುನಾವಣಾ ಆಯುಕ್ತರಾಗಿ ಸೇವೆ ಸಲ್ಲಿಸಿದವರು ಯಾರು?

1) ವಿ. ಎಸ್. ರಮಾದೇವಿ 2) ಪ್ರತಿಭಾ ಪಾಟೀಲ್
3) ಇಂದಿರಾ ಗಾಂಧಿ 4) ಯಾರೂ ಅಲ್ಲ

3. ಈ ಕೆಳಗಿನವುಗಳಲ್ಲಿ ಯಾವ ಹೊಂದಾಣಿಕೆ ತಪ್ಪಾಗಿದೆ?

1) ಲಾಲ್ ಬಹದ್ದೂರ್ ಶಾಸ್ತ್ರಿ– ವಿಜಯಘಾಟ್
2) ಮಹಾತ್ಮಾ ಗಾಂಧಿ–ಅಭಯ್ ಘಾಟ್
3) ಚರಣ್‌ಸಿಂಗ್–ಕಿಸಾನ್‌ಘಾಟ್
4) ಬಿ. ಆರ್. ಅಂಬೇಡ್ಕರ್–ಚೈತ್ರಭೂಮಿ

4. ಆಗ್ರಾ ಯಾವ ನದಿಯ ದಡದಲ್ಲಿದೆ?

1) ಬ್ರಹ್ಮಪುತ್ರ 2) ತಪತಿ
3) ಯಮುನಾ 4) ಮಹಾನದಿ

5. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಎಲ್ಲಿದೆ?

1) ದೆಹಲಿ 2) ಕೋಲ್ಕತ್ತಾ
3) ವಾರಣಾಸಿ 4) ಡೆಹ್ರಾಡೂನ್

6. ಸರ್ದಾರ್ ವಲ್ಲಭಬಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿರುವ ಸ್ಥಳ ಯಾವುದು?

1) ಕೋಲ್ಕತ್ತಾ 2) ಅಮೃತಸರ
3) ಹೈದರಾಬಾದ್ 4) ಅಹಮದಾಬಾದ್

7. ಪ್ರತಿವರ್ಷ ವಿಶ್ವ ಭೂ ದಿನವನ್ನು ಎಂದು ಆಚರಿಸುತ್ತಾರೆ?

1) ಮಾರ್ಚ್–22 2) ಏಪ್ರಿಲ್ –22
3) ಮಾರ್ಚ್–21 4) ಏಪ್ರಿಲ್ –21

8. 2011ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆಯ ಪ್ರಮಾಣ

1) 75% 2) 82% 3) 68% 4) 56%

9. ಸಂಸ್ಕಾರ ಎಂಬ ವಿವಾದಾತ್ಮಕ ಕೃತಿಯನ್ನು ರಚಿಸಿದವರು ಯಾರು?

1) ಪಿ ವಿ ನಾರಾಯಣ

2) ಎಚ್ ಎಸ್ ಶಿವಪ್ರಕಾಶ

3) ಯು ಆರ್ ಅನಂತಮೂರ್ತಿ

4) ಎಚ್ ವಿಶ್ವನಾಥ್

10. ಎ ಎನ್ ಮೂರ್ತಿರಾವ್‌ರವರ ಆತ್ಮ ಕಥನ ಯಾವುದು?

1) ಸಂಜೆಗಣ್ಣಿನ ಹಿನ್ನೋಟ 2) ಮತ್ತೊಬ್ಬನ ಆತ್ಮಚರಿತ್ರೆ

3) ಊರುಕೇರಿ 4) ಸ್ಮೃತಿ ಪಟಲದಲ್ಲಿ

11. ವಿಶ್ವ ಕ್ಷಯ ರೋಗ ದಿನವನ್ನು ಎಂದು ಆಚರಿಸಲಾಗುತ್ತದೆ?

1) ಮಾರ್ಚ್–24 2) ಏಪ್ರಿಲ್ 15

3) ಜನವರಿ 28 4) ಮಾರ್ಚ್ 20

13. ನೈಜೀರಿಯಾದ ರಾಜಧಾನಿ ಯಾವುದು?

1) ಅಬುಜಾ 2) ಒಟ್ಟಾವೊ

3) ಕೊಲಂಬೊ 4) ಢಾಕಾ

14. ಕೇಂದ್ರ ಲೋಕಸೇವಾ ಆಯೋಗದ (UPSC) ಪ್ರಸ್ತುತ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವವರು ಯಾರು?

1) ಅಲ್ಕಾ ಸಿರೋಹಿ 2) ದೀಪಕ್ ಗುಪ್ತಾ

3) ಡೇವಿಡ್ ಸೈಮ್ಲಿ 4) ಡಿ ಪಿ ಅಗರವಾಲ್

15. ಬ್ರೆಂಡನ್ ಮೆಕ್ಲಮ್ ಯಾವ ದೇಶದ ಕ್ರಿಕೆಟ್ ಆಟಗಾರ ?

1) ಆಸ್ಟ್ರೇಲಿಯಾ 2) ಶ್ರೀಲಂಕಾ

3) ದಕ್ಷಿಣ ಆಫ್ರಿಕಾ 4) ನ್ಯೂಜಿಲೆಂಡ್

## ಶೈಕ್ಷಣಿಕ ಮನೋವಿಜ್ಞಾನ ಮತ್ತು ವಿಕಸನ

16. ಗುಂಪಿನಲ್ಲಿ ವ್ಯಕ್ತಿಯ ವರ್ತನೆಯನ್ನು ಅಧ್ಯಯನ ಮಾಡುವ ಮನೋವಿಜ್ಞಾನದ ಶಾಖೆ ಯಾವುದು?
1) ಸಮುದಾಯ ಮನೋವಿಜ್ಞಾನ
2) ಸಾಮಾನ್ಯ ಮನೋವಿಜ್ಞಾನ
3) ಸಾಮಾಜಿಕ ಮನೋವಿಜ್ಞಾನ
4) ಮಿಲಿಟರಿ ಮನೋವಿಜ್ಞಾನ

17. ವಿಕಾಸ ಸಾಧ್ಯವಾಗುವುದು ವ್ಯಕ್ತಿ ಮತ್ತು ------ ಅಂತರ್ ಕ್ರಿಯೆಯಿಂದ
1) ಪರಿಸರ 2) ಅನುವಂಶೀಯತೆ
3) ಸಂಸ್ಕೃತಿ 4) ಸಮಾಜ

18. ಆಧುನಿಕ ವರ್ತನಾವಾದದ ಸಾಮಾನ್ಯ ನಮೂನೆಯು ಈ ಕೆಳಕಂಡ ಯಾರ ಆರಂಭಿಕ ಕಾರ್ಯದಿಂದ ಮೂಡಿತು?
1) ಬಿ ಎಫ್ ಸ್ಕಿನ್ನರ್ 2) ಜೆ ಬಿ ವಾಟ್ಸನ್
3) ಎಚ್ ಜಿ ಐಸೆಂಕ್ 4) ವಿಲಿಯಂ ಜೇಮ್ಸ್

19. ವ್ಯಕ್ತಿಯ ಹಿಂದಿನ ಚರಿತ್ರೆಯನ್ನು ತಿಳಿಯಲು ಸೂಕ್ತವಾದ ವಿಧಾನ
1) ವ್ಯಕ್ತಿ ಚರಿತ್ರೆ ವಿಧಾನ 2) ಪ್ರಾಯೋಗಿಕ ವಿಧಾನ
3) ಮನೋವಿಶ್ಲೇಷಣಾ ವಿಧಾನ 4) ವ್ಯಕ್ತಿ ಅಧ್ಯಯನ ವಿಧಾನ

20. ಮಾನವನಲ್ಲುಂಟಾಗುವ ಗುಣಾತ್ಮಕ ಬದಲಾವಣೆಗಳನ್ನು ___ ಎಂದು ಕರೆಯುವರು
1) ವಿಕಾಸ 2) ಬೆಳವಣಿಗೆ 3) ಪರಿಕಲ್ಪನೆ 4) ವ್ಯಕ್ತಿತ್ವ

21. ಮನೋವಿಜ್ಞಾನದ ಆಧಾರದಲ್ಲಿ ಶಿಕ್ಷಣವನ್ನು ಜಾರಿಗೆ ತಂದ ಮೊದಲ ವ್ಯಕ್ತಿ
1) ಫ್ರೊಬೆಲ್ 2) ಥಾರ್ನ್‌ಡೈಕ್
3) ಪೆಸ್ತಾಲಜಿ 4) ಟರ್ಮನ್

22. ವ್ಯಕ್ತಿಯ ವಿಕಾಸದ ಹಂತಗಳಲ್ಲಿ ಅತ್ಯಂತ ಕಡಿಮೆ ಅವಧಿಯ ಹಂತ ___
1) ತಾರುಣ್ಯ 2) ವೃದ್ಧಾಪ್ಯ
3) ಬಾಲ್ಯಾವಸ್ಥೆ 4) ಶೈಶವಾವಸ್ಥೆ

24. ವ್ಯಕ್ತಿಯ ಜೀವಮಾನದ 6 ರಿಂದ 12 ವಯಸ್ಸಿನವರೆಗೆ ಇರುವ ಅವಧಿಯನ್ನು ____ ಎಂದು ಕರೆಯುವರು

1) ಪೂರ್ವ ಬಾಲ್ಯ
2) ಉತ್ತರ ಬಾಲ್ಯ
3) ಪ್ರೌಢಾವಸ್ಥೆ
4) ತಾರುಣ್ಯ

25. ಒಂದೇ ವಯಸ್ಸಿನ ವ್ಯಕ್ತಿಗಳಾದರೂ ಎತ್ತರ, ಬಣ್ಣ, ದಪ್ಪ, ಆಕಾರ ಮುಂತಾದವುಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಹೀಗೆಂದು ಕರೆಯುವರು

1) ಕಲಿಕೆಯ ಭಿನ್ನತೆ
2) ಮಾನಸಿಕ ಭಿನ್ನತೆ
3) ದೈಹಿಕ ಭಿನ್ನತೆ
4) ವೈಯಕ್ತಿಕ ಭಿನ್ನತೆ

26. ತರಗತಿಯಲ್ಲಿನ ವೈಯಕ್ತಿಕ ಭಿನ್ನತೆಗಳನ್ನು ಸಂಧಿಸುವ ಅತ್ಯಂತ ಪರಿಣಾಮಕಾರಿ ಬೋಧನಾ ವಿಧಾನವೆಂದರೆ

1) ಪ್ರತ್ಯಕ್ಷಿಕ ವಿಧಾನ
2) ಕಾರ್ಯ ನಿಯೋಜಿತ ವಿಧಾನ
3) ಉಪನ್ಯಾಸ ವಿಧಾನ
4) ಪ್ರಾಯೋಗಿಕ ವಿಧಾನ

27. ಕಲಿಕೆಯ ಅರ್ಥಪೂರ್ಣ ವ್ಯಾಖ್ಯೆ ಈ ಕೆಳಗಿನವುಗಳಲ್ಲ ಯಾವುದು

1) ಸಮಸ್ಯೆಗಳ ಪರಿಹಾರ
2) ಜ್ಞಾನದ ಗಳಿಕೆ ಮತ್ತು ಸಂಘಟನೆ
3) ವರ್ತನೆಯ ಬದಲಾವಣೆ
4) ಕೌಶಲಗಳ ಅಭಿವೃದ್ಧಿ

28. ಹಿಂದುಳಿಯುವಿಕೆಯ ತೀವ್ರತೆಯನ್ನು ಯಾವುದರಿಂದ ಅಳೆಯಬಹುದು

1) ಸಮಾಜಮಿತಿಯಿಂದ
2) ಸಾಧನಾ ಪರೀಕ್ಷೆಗಳಿಂದ
3) ಸಂಖ್ಯಾಶಾಸ್ತ್ರದಿಂದ
4) ಐಕ್ಯೂನಿಂದ

29. ಧಾರಣಶಕ್ತಿ ಯಾವ ಮಕ್ಕಳಲ್ಲಿ ಕಡಿಮೆ ಇರುತ್ತದೆ

1) ಸಾಮಾನ್ಯ ಮಕ್ಕಳು
2) ಪ್ರತಿಭಾನ್ವಿತ ಮಕ್ಕಳು
3) ಮಂದಗತಿಯ ಕಲಿಕೆಯ ಮಕ್ಕಳು

30. ವಿಕಾಸಾತ್ಮಕ ಕಾರ್ಯಗಳು ಈ ಕೆಳಗಿನ ಯಾವುದನ್ನು ಸೂಚಿಸುತ್ತವೆ?

1) ನಿರ್ದಿಷ್ಟ ವಯೋಮಾನದ ಅಸಾಮಾನ್ಯತೆ

2) ವಿಕಾಸದ ಮೈಲುಗಲ್ಲುಗಳು

3) ನಿರ್ದಿಷ್ಟ ವಯಸ್ಸಿನಲ್ಲಿ ಕಂಡು ಬರುವ ಸರಾಸರಿ ವಿಕಾಸ

4) ಯಾವುದೂ ಅಲ್ಲ

31. ಮನೋಧೋರಣೆ ಎಂದರೆ

1) ಕಲಿತ ವರ್ತನೆ

2) ಸ್ವಾಭಾವಿಕ ವರ್ತನೆ

3) ಸಂಜ್ಞಾತ್ಮಕ ವರ್ತನೆ

4) ಅನುವಂಶೀಯ ವರ್ತನೆ

32. ಮಕ್ಕಳು ಕಲಿಯುವ ವಿಷಯ ಸನ್ನಿವೇಶವನ್ನು ಇಡಿಯಾಗಿ ಅರ್ಥಮಾಡಿಕೊಂಡು ಕಲಿಯುವ ಕಲಿಕೆ

1) ಪ್ರಭುತ್ವ ಕಲಿಕೆ

2) ಅರ್ಥಪೂರ್ಣ ಕಲಿಕೆ

3) ಒಳನೋಟ ಕಲಿಕೆ

4) ಪ್ರಯತ್ನ ದೋಷ ಕಲಿಕೆ

33. ಮಗುವಿನ ಬೆಳವಣಿಗೆಗೆ ಸಂಬಂಧಿಸಿದ ಜ್ಞಾನಾತ್ಮಕ ವಿಕಾಸ ಸಿದ್ಧಾಂತದ ಪ್ರತಿಪಾದಕ

1) ಪಾವ್ಲೋವ್

2) ಬ್ರೂನರ್

3) ಸ್ಕಿನ್ನರ

4) ಮಾಸ್ಲೊ

34. ವ್ಯಕ್ತಿಯ ವಯೋಮಾನ ಹೆಚ್ಚಾದಂತೆ ಅವನ ಭಾವನಾತ್ಮಕ ಸ್ಥಿರತೆಯು

1) ಕಡಿಮೆಯಾಗುತ್ತದೆ

2) ಹೆಚ್ಚಾಗುತ್ತದೆ

3) ಸ್ಥಿರವಾಗಿರುತ್ತದೆ

4) ಮರೆಯಾಗುತ್ತದೆ

36. ಅ[illegible]ವಿಕೆ ಭಾಷಾ ವಿಕಾಸದ ಯಾವ ಹಂತವಾಗಿದೆ?

1) ನಾಲ್ಕನೇ ಹಂತ

2) ಮೂರನೇ ಹಂತ

3) ಎರಡನೇ ಹಂತ

4) ಮೊದಲನೇ ಹಂತ

37. ಬುದ್ಧಿಶಕ್ತಿ ಎನ್ನುವುದು

1) ಜ್ಞಾನಾತ್ಮಕ ಸಾಮರ್ಥ್ಯ

2) ಚಲನಾ ಸಾಮರ್ಥ್ಯ

3) ಭಾವನಾತ್ಮಕ ಸಾಮರ್ಥ್ಯ

4) ಆಲೋಚನಾ ಸಾಮರ್ಥ್ಯ

38. ಪ್ರಯತ್ನ ಮತ್ತು ಪ್ರಮಾದ ಕಲಿಕೆಯನ್ನು ಪ್ರಚುರ ಪಡಿಸಿದವರು

1) ಸ್ಕಿನ್ನರ್

2) ಥಾರ್ನ್‌ಡೈಕ್

3) ಪಾವ್ಲೋವ್

4) ಕೋಹ್ಲರ್

39. ಒಬ್ಬ ವ್ಯಕ್ತಿಯ ದೈಹಿಕ ವಯಸ್ಸು 20 ವರ್ಷಗಳು ಮತ್ತು ಮಾನಸಿಕ ವಯಸ್ಸು 15 ವರ್ಷಗಳಾದರೆ ಅವನ ಬುದ್ಧಿಶಕ್ತಿ ಸೂಚ್ಯಂಕ ____

1) 130 2) 125 3) 85 4) 75

40. ವಂಶವಾಹಿಗಳು

1) ಅನುವಂಶೀಯ ಗುಣಗಳನ್ನು ಹೊಂದಿರುತ್ತದೆ

2) ಪರಿಸರದ ಗುಣಗಳನ್ನು ಹೊಂದಿರುತ್ತದೆ

3) ಸಾಮಾಜಿಕ ಪ್ರಭಾವಕ್ಕೆ ಒಳಪಡುತ್ತವೆ

4) ಕೌಟುಂಬಿಕ ಹಿನ್ನೆಲೆಯನ್ನು ಹೊಂದಿರುತ್ತವೆ.

## ಕನ್ನಡ

41. ಮೂರು ಅಥವಾ ಅದಕ್ಕಿಂತ ಹೆಚ್ಚು ಮಾತ್ರೆಗಳ ಕಾಲಾವಧಿಯಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿವು

1) ಹ್ರಸ್ವ ಸ್ವರಗಳು 2) ದೀರ್ಘ ಸ್ವರಗಳು

3) ಪ್ಲುತ ಸ್ವರಗಳು 4) ಅನುಸ್ವರಗಳು

42. ಸ್ವರಗಳಲ್ಲಿ ಒಟ್ಟು ವಿಧಗಳೆಷ್ಟು ?

1) ನಾಲ್ಕು 2) ಮೂರು

3) ಎರಡು 4) ಒಂದು

43. ಅಕ್ಷರಗಳನ್ನು ಸಾಮಾನ್ಯವಾಗಿ ವ್ಯಾಕರಣಕಾರರು ಹೀಗೆಂದು ಕರೆಯುವರು

1) ಶಬ್ದಗಳು 2) ವಾಕ್ಯಗಳು

3) ವರ್ಣಗಳು 4) ಪದಗಳು

44. ರಾಜಪುತ್ರಿ– ಇದು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

1) ತೃತೀಯಾ ತತ್ಪುರುಷ ಸಮಾಸ

2) ಷಷ್ಠಿ ತತ್ಪುರುಷ ಸಮಾಸ

3) ಸಪ್ತಮಿ ತತ್ಪುರುಷ ಸಮಾಸ

4) ಪಂಚಮಿ ತತ್ಪುರುಷ ಸಮಾಸ

45. ಕ್ + ಅ + ರ್ + ನ್ + ಆ + ಟ್ + ಅ + ಕ್ + ಅ ಎಂಬ ಗುಣಿತಾಕ್ಷರ ವಿಭಜನೆ ಕ್ರಮವು ಯಾವುದರ ಸರಿಯಾದ ರೂಪ

1) ಕಾರ್ಮೋಡ 2) ಕರುನಾಡು

3) ಕರ್ನಾಟಕ 4) ಕವಿನಾಡು

46. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಗುರುತಿಸಿ

1) ಅಪ್ಪ
2) ಕನ್ನಡ
3) ಮೊಮ್ಮಗ
4) ಪುಸ್ತಕ

47. ನೆನಪಾಗು – ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

1) ಸ್ವರಲೋಪಸಂಧಿ
2) ಆಗಮ ಸಂಧಿ
3) ಸವರ್ಣದೀರ್ಘ ಸಂಧಿ
4) ಆದೇಶ ಸಂಧಿ

48. 'ಬೆಂಬತ್ತು' ಎಂಬ ಸಂಧಿ ಪದದ ವಿಗ್ರಹ ರೂಪ

1) ಬೆಂ + ಬತ್ತು
2) ಬೆನ್ + ಪತ್ತು
3) ಬೆಂಬ್ + ಪತ್ತು
4) ಬೆನ್ + ಹತ್ತು

49. ಕಾಯಕವೇ ಕೈಲಾಸ– ಎಂಬುದು ಯಾವ ಅಲಂಕಾರಕ್ಕೆ ಉದಾಹರಣೆಯಾಗಿದೆ

1) ರೂಪಕಾಲಂಕಾರ
2) ಉಪಮಾಲಂಕಾರ
3) ದೀಪಕ ಅಲಂಕಾರ
4) ಶ್ಲೇಷಾಲಂಕಾರ

50. ಬೇಡ ಬೇಡ, ಹೌದು ಹೌದು– ಇವುಗಳು

1) ಜೋಡು ನುಡಿಗಳು
2) ಅನುಕರಣಾವ್ಯಯಗಳು
3) ದ್ವಿರುಕ್ತಿಗಳು
4) ಅವ್ಯಯಗಳು